# ದೃಷ್ಟಿದೋಷ ನಿವಾರಣೆಗೆ 'ಆಶಾಕಿರಣ' ಪರಿಹಾರ!

ಕಾಲ ಬದಲಾದಂತೆ ಎಲ್ಲಾ ವಯೋಮಾನದವರನ್ನು ಕಾಡುತ್ತಿರುವ ದೃಷ್ಟಿ ದೋಷ ನಿವಾರಣೆಗೆ ಪರಿಹಾರೋಪಾಯವಾಗಿ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 'ಆಶಾಕಿರಣ' ಯೋಜನೆಯನ್ನು ಜಾರಿಗೊಳಿಸಿದೆ. ಈ ಪರಿಣಾಮ ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಕೋಟ್ಯಾಂತರ ಜನರ ದೃಷ್ಟಿ ಸಮಸ್ಯೆಗಳಿಗೆ ನೆರವಾದಂತಾಗಿದೆ. ಈ ಸಮಸ್ಯೆಗಳಿಗೆ ಗ್ರಾಮ ಮಟ್ಟದಲ್ಲೇ ಪರಿಹಾರ ಕಂಡುಕೊಳ್ಳಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 'ಆಶಾಕಿರಣ' ಯೋಜನೆಯಡಿ ಪರಿಣಾಮಕಾರಿ ಹೆಜ್ಜೆಯನ್ನಿಟ್ಟಿದೆ. ಪ್ರಾಯೋಗಿಕವಾಗಿ 202223ರ ಆರ್ಥಿಕ ವರ್ಷದಲ್ಲಿ ಚಿಕ್ಕಬಳ್ಳಾಪುರ, ಚಾಮರಾಜನಗರ, ಹಾವೇರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಈ ಕಾರ್ಯಕ್ರಮದಡಿ ಒಟ್ಟು 68.21 ಲಕ್ಷ ಜನರ ಪ್ರಾಥಮಿಕ ತಪಾಸಣೆ ನಡೆಸಲಾಗಿದೆ. ಈ ಪೈಕಿ 10.82ಲಕ್ಷ ಜನರನ್ನು 2ನೇ ಹಂತದ ತಪಾಸಣೆಗೆ ಗುರುತಿಸಲಾಗಿತ್ತು. ಜತೆಗೆ, 3.25ಲಕ್ಷ ಜನರಿಗೆ ಕನ್ನಡಕ ಬಳಕೆಯ ಸಲಹೆ ನೀಡಿ, ಈ ಪೈಕಿ 2.70ಲಕ್ಷ ಜನರಿಗೆ ಕನ್ನಡಕ ವಿತರಿಸಲಾಗಿದೆ. ವಿಶೇಷವಾಗಿ ಯೋಜನೆಯ ಭಾಗವಾಗಿ ದೃಷ್ಟಿದೋಷವುಳ್ಳ ಜನರಿಗೆ ಅಗತ್ಯ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಸಹ ಒದಗಿಸಲಾಗುತ್ತಿದ್ದು, 59,842 ಮಂದಿಗೆ ಈ ಸೌಕರ್ಯ ಲಭ್ಯವಾಗಿದೆ. ಆಶಾಕಿರಣ ಯೋಜನೆಯ 2ನೇ ಹಂತವಾಗಿ ಚಿತ್ರದುರ್ಗ, ಮಂಡ್ಯ, ರಾಯಚೂರು, ಉತ್ತರಕನ್ನಡ ಜಿಲ್ಲೆಗಳಲ್ಲಿ ಒಟ್ಟು 72.15ಲಕ್ಷ ಜನರನ್ನು ಕಣ್ಣಿನ ತಪಾಸಣೆಗೊಳಪಡಿಸಲಾಗಿದೆ. ಈ ಪೈಕಿ 13.65 ಜನರನ್ನು ಎರಡನೇ ಹಂತದ ತಪಾಸಣೆಗೊಳಪಡಿಸಲಾಗಿದೆ. ಈ ಪೈಕಿ 2.89ಲಕ್ಷ ಜನರಿಗೆ ಕನ್ನಡದ ಸಲಹೆ ನೀಡಲಾಗಿದ್ದು, ಈಗಾಗಲೇ 1.60 ಮಂದಿಗೆ

## ಯೋಜನೆಯಡಿ ಚಿಕಿತ್ಸೆ ಪಡೆಯುವುದು ಹೇಗೆ?

1. ಆಶಾಕಿರಣ ಯೋಜನೆಯಡಿ ಉಚಿತ ಚಿಕಿತ್ಸೆ ಪಡೆಯಲು 2 ಮಾರ್ಗಗಳಿವೆ.
2. ಸ್ಥಳೀಯವಾಗಿ ಮನೆಭೇಟಿಗೆ ಲಭ್ಯವಿರುವ ಆಶಾಕಾರ್ಯಕರ್ತೆಯರಿಗೆ ಕಣ್ಣಿನ ಸಮಸ್ಯೆ ಕುರಿತು ಮಾಹಿತಿ ನೀಡುವುದು.
3. ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರ(ಸಿಹೆಚ್‌ಸಿ), ತಾಲೂಕು ಆಸ್ಪತ್ರೆ(ಟಿಎಚ್), ಜಿಲ್ಲಾಸ್ಪತ್ರೆಯ ವೈದ್ಯಕೀಯ ಕಾಲೇಜು ದೃಷ್ಟಿ ಕೇಂದ್ರಕ್ಕೆ ಭೇಟಿ ನೀಡುವುದು.



**ರಾಜ್ಯದ ನಾಗರಿಕರ ಕಣ್ಣಿನ ಸಮಸ್ಯೆಗಳಿಗೆ ಪರಿಹಾರೋಪಾಯವಾಗಿ ಆರೋಗ್ಯ ಇಲಾಖೆಯಿಂದ 'ಆಶಾಕಿರಣ' ಯೋಜನೆ ಜಾರಿ, ರಾಜ್ಯಾದ್ಯಂತ 3 ಹಂತಗಳಲ್ಲಿ ಕೋಟ್ಯಾಂತರ ಜನರಿಗೆ ನೆರವು!**

### ದೃಷ್ಟಿ ಕೇಂದ್ರಗಳಲ್ಲಿ ಲಭ್ಯವಿರುವ ಸೇವೆಗಳು

- ನೇತ್ರ ತಪಾಸಣೆ ಹಾಗೂ ಉಚಿತ ಕನ್ನಡಕ ವಿತರಣೆ
- ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ
- ನೇತ್ರ ಸಂಗ್ರಹಣೆ



'ದೃಷ್ಟಿದೋಷ ನಿವಾರಣೆಗೆ ರಾಜ್ಯ ಸರ್ಕಾರ ಜಾರಿಗೆ ತಂದಿದ್ದ 'ಆಶಾಕಿರಣ' ಯೋಜನೆಯಲ್ಲಿ ಮಹತ್ವದ ಬದಲಾವಣೆ ತರಲಾಗಿದ್ದು, ರಾಜ್ಯದ ಜಿಲ್ಲಾಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಮತ್ತು ಸಿಎಚ್‌ಸಿಗಳಲ್ಲಿ ನೂತನವಾಗಿ 393 ಆಶಾಕಿರಣ ದೃಷ್ಟಿ ಕೇಂದ್ರಗಳನ್ನು ತೆರೆಯಲಾಗಿದೆ. ಈ ಮೊದಲು ಆಶಾಕಿರಣ ಯೋಜನೆಯಡಿ ಆಶಾ ಕಾರ್ಯಕರ್ತೆಯರು ಅಭಿಯಾನದ ಮೂಲಕ ಮನೆ ಮನೆಗೆ ತೆರಳಿ ಕಣ್ಣಿನ ತಪಾಸಣೆ ನಡೆಸಿ ಚಿಕಿತ್ಸೆಗೆ ಅನುವಾಗುತ್ತಿದ್ದರು. ನಿಗದಿತ ಸಮಯದಲ್ಲಿ ಅಭಿಯಾನದ ರೀತಿಯಲ್ಲಿ ತಪಾಸಣಾ ಕಾರ್ಯ ನಡೆಯುತ್ತಿತ್ತು. ಇದೀಗ ಸರ್ಕಾರಿ ಆಸ್ಪತ್ರೆಗಳಲ್ಲಿ ಶಾಶ್ವತ ದೃಷ್ಟಿ ಕೇಂದ್ರಗಳನ್ನೇ ಪ್ರಾರಂಭಿಸಲಾಗಿದ್ದು, ನಿರಂತರವಾಗಿ ಕಣ್ಣಿನ ಆರೋಗ್ಯ ಸೇವೆ ಈ ಕೇಂದ್ರಗಳಲ್ಲಿ ದೊರೆಯಲಿದೆ.

**-ದಿನೇಶ್ ಗುಂಡೂರಾವ್,**
ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

